| ದಿನ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಕಲಿಕಾ ಫಲ | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಕಲಿಕಾ ಫಲ | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 EVS-3 | 30 ನಿ | ಪರಿಸರ ಅಧ್ಯಯನ 1. ನಮ್ಮನ್ನು ನೋಡಿದ್ದೀರಾ ? (ಸಸ್ಯಗಳು) | * ಸುತ್ತಮುತ್ತಲಿನ ಪರಿಸರದ ಸಾಮಾನ್ಯ ಪ್ರಾಣಿಗಳು ಮತ್ತು ಸಸ್ಯಗಳನ್ನು (ಹಣ್ಣು ಮತ್ತು ತರಕಾರಿ) ಗುರುತಿಸುವುದು. | | ಶಿಕ್ಷಕ | **ಕಲಿಕೆಯ ಚಟುವಟಿಕೆ** (ಮುಂದುವರಿದುದು...)<br>ಎರಡನೇ ತರಗತಿಯಲ್ಲಿ ಪ್ರದರ್ಶಿಸಲ್ಪಡುವ ಚಿತ್ರಪಟ ಹಾಗೂ ನೈಜ ಪ್ರಾತ್ಯಕ್ಷಿಕೆಗಳನ್ನು ವೀಕ್ಷಿಸಿ ಗಮನಿಸುವರು. | ಪರಿಸರ ಅಧ್ಯಯನ 1. ನಮ್ಮ ಸುತ್ತಲಿನ ಪ್ರಾಣಿಗಳು | * ಸ್ಥಳೀಯ ಪ್ರಾಣಿಗಳನ್ನು (ಪಕ್ಷಿ ಮತ್ತು ಕೀಟಗಳನ್ನು) ಗುರುತಿಸುವುದು. | ಪಕ್ಷಿ ಮತ್ತು ಕೀಟಗಳ ಚಿತ್ರಪಟ / ನೈಜ ಪ್ರಾತ್ಯಕ್ಷಿಕೆ (ಪರಿಸರದಲ್ಲಿ) | ಶಿಕ್ಷಕರು | **ಕಲಿಕೆಯ ಚಟುವಟಿಕೆ :** (ಮುಂದುವರಿದಿದೆ)<br>ಶಿಕ್ಷಕರು ನಮ್ಮ ಸುತ್ತಲೂ ಕಂಡುಬರುವ, ಪಕ್ಷಿ ಮತ್ತು ಕೀಟಗಳ ಚಿತ್ರಪಟ ಪ್ರದರ್ಶಿಸುತ್ತಾ ಅವುಗಳನ್ನು ಗುರುತಿಸಲು ಹೇಳುವರು.<br>ನಂತರ ಪ್ರಾಣಿ ಪಕ್ಷಿಗಳಿಂದಾಗುವ ಉಪಯೋಗಗಳ ಬಗ್ಗೆ ಶಿಕ್ಷಕರು ಮಕ್ಕಳೊಂದಿಗೆ ಸಂಭಾಷಿಸುವರು. |
| | 10 ನಿ | | | | | ಸೂಚನೆ : ಆಲಿಸುವರು | | | | ಶಿಕ್ಷಕ | ಶಿಕ್ಷಕರು ಮಕ್ಕಳಿಗೆ, ಹಿರೇಮಣಿಯ ನೇತೃತ್ವದಲ್ಲಿ ""ನಾನು ಯಾರು ಹೇಳು?" ಎಂಬ ಆಟ ಆಡಿಸಲು ಸೂಚನೆ ನೀಡುವರು. |
| | 30 ನಿ | | | ನೈಜಹಣ್ಣು ತರಕಾರಿಗಳು, ಚಿತ್ರಪಟಗಳು | ಶಿಕ್ಷಕರು | ಶಿಕ್ಷಕರು ವಿವಿಧ (ಪಠ್ಯದಲ್ಲಿರುವ) ಹಣ್ಣು ಮತ್ತು ತರಕಾರಿಗಳ ಚಿತ್ರಪಟಗಳನ್ನು ಪ್ರದರ್ಶಿಸುತ್ತಾ / ನೈಜ ಹಣ್ಣು ಮತ್ತು ತರಕಾರಿ ತೋರಿಸುತ್ತಾ ಅವುಗಳನ್ನು ಗುರುತಿಸಿ ಹೆಸರಿಸಲು ಸೂಚಿಸುವರು .<br>ಮಕ್ಕಳು ಗುರುತಿಸದ ವಸ್ತುಗಳನ್ನು ಶಿಕ್ಷಕರು ಹೆಸರಿಸಿ ಪರಿಚಯಿಸುವರು.<br>ಹಣ್ಣು-ತರಕಾರಿಗಳ ಬಣ್ಣ ಆಕಾರ ಹಾಗೂ ರುಚಿಗಳ ಬಗ್ಗೆ ಚರ್ಚೆ ನಡೆಸುವರು. | | | | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ಆಟದಲ್ಲಿ ಪಾಲ್ಗೊಳ್ಳುವರು. |
| | 10 ನಿ | | | | | ಹಣ್ಣು ಮತ್ತು ತರಕಾರಿಗಳನ್ನು ಸ್ಪರ್ಶಿಸಿ ಅನುಭವ ಪಡೆಯಲು ಶಿಕ್ಷಕರು ಅವಕಾಶ ಮಾಡಿಕೊಡುವರು ಮಕ್ಕಳು ಅನುಭವ ಪಡೆಯುವರು. | | | | | ಆಟವನ್ನು ವೀಕ್ಷಿಸುತ್ತಾ, ಶಿಕ್ಷಕರು ಮಕ್ಕಳಿಗೆ ಮಾರ್ಗದರ್ಶನ ಮತ್ತು ಸಲಹೆ ನೀಡುವರು. |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಕಲಿಕಾ ಘಟಕ | ಸಾಮರ್ಥ್ಯಗಳು | ಬಳಸಬಹುದಾದ ಕಲಿಕೋಪಕರಣ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಕಲಿಕಾ ಘಟಕ | ಸಾಮರ್ಥ್ಯಗಳು | ಬಳಸಬಹುದಾದ ಕಲಿಕೋಪಕರಣ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4<br>SUPW-2 | 05 ನಿ | ಸಾ.ಉ.ಉ.ಕಾ.<br>ಎಲೆಗಳ ಸಂಗ್ರಹಣೆ ಮತ್ತು ಸಂರಕ್ಷಣೆ | "ಪರಿಸರದಲ್ಲಿರುವ ಉಪಯುಕ್ತ ವಸ್ತುಗಳನ್ನು ಸಂಗ್ರಹಿಸಿ ಸಂರಕ್ಷಿಸುವುದು" | "ಶಾಲೆಯ ಆವರಣದಲ್ಲಿರುವ ಗಿಡಮರಗಳ ಎಲೆಗಳು" ಹಳೆಯ ಪುಸ್ತಕಗಳು | ಶಿಕ್ಷಕ | ಮಕ್ಕಳನ್ನು ಅವರ [1 ಮತ್ತು 2ನೇ ತರಗತಿ] ಸಂಖ್ಯೆಗನುಗುಣವಾಗಿ 3 ಅಥವಾ 4 ಮಕ್ಕಳ ಗುಂಪುಗಳಲ್ಲಿ ವಿಂಗಡಿಸಿ ಶಾಲೆಯ ಹೊರ ಆವರಣದಲ್ಲಿರುವ ಎಲ್ಲಾ ಗಿಡಮರಗಳಿಂದ ಒಂದು ಅಥವಾ ಎರಡು ಹಸಿರು ಎಲೆ ಸಂಗ್ರಹಿಸಿಕೊಂಡು ಬರಲು ತಿಳಿಸುವರು. | ಸಾ.ಉ.ಉ.ಕಾ.<br>"ಎಲೆಗಳ ಸಂಗ್ರಹಣೆ ಮತ್ತು ಸಂರಕ್ಷಣೆ" | ಪರಿಸರದಲ್ಲಿರುವ ಉಪಯುಕ್ತ ವಸ್ತುಗಳನ್ನು ಸಂಗ್ರಹಿಸಿ ಸಂರಕ್ಷಿಸುವುದು | ಶಾಲೆಯ ಆವರಣದಲ್ಲಿರುವ ಗಿಡಮರಗಳ ಎಲೆಗಳು, ಹಳೆಯ ಪುಸ್ತಕಗಳು | ಶಿಕ್ಷಕ | 1ನೇ ತರಗತಿಯಲ್ಲಿ ನೀಡಿರುವ ಚಟುವಟಿಕೆ ಮಾಡಿಸುವರು. |
| | 30 ನಿ | | | | ಶಿಕ್ಷಕ | ಮಕ್ಕಳು ತಂಡಗಳಲ್ಲಿ ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕ | 1ನೇ ತರಗತಿಯಲ್ಲಿ ಸೂಚಿಸಿರುವ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 10 ನಿ | | | | ಶಿಕ್ಷಕ | ಮಕ್ಕಳು ಸಂಗ್ರಹಿಸಿರುವ ವಿವಿಧ ರೀತಿಯ ಎಲೆಗಳನ್ನು ತೆಗೆದುಕೊಂಡು ತರಗತಿ ಕೋಣೆಗೆ ಬರುವಂತೆ ತಿಳಿಸುವರು ಹಾಗೂ ಅವರವರ ಗುಂಪುಗಳಲ್ಲಿ ಕೂರಿಸುವರು. | | | | ಶಿಕ್ಷಕ | 1ನೇ ತರಗತಿಯಲ್ಲಿ ಸೂಚಿಸಿರುವಂತೆ ಚಟುವಟಿಕೆ ಮಾಡಿಸುವರು |
| | 25 ನಿ | | | | ಶಿಕ್ಷಕ | ಮಕ್ಕಳು ಸಂಗ್ರಹಿಸಿ ತಂದಿರುವ ವಿವಿಧ ರೀತಿಯ ಎಲೆಗಳನ್ನು ಚಿಕ್ಕ, ದೊಡ್ಡ ಮತ್ತು ಉದ್ದದ ಎಲೆಗಳನ್ನು ವರ್ಗೀಕರಿಸುವಂತೆ ತಿಳಿಸುವರು.<br>ಹೀಗೆ ಗುಂಪು ಮಾಡಿದ ಎಲೆಗಳನ್ನು ತರಗತಿಯಲ್ಲಿರುವ ಹಳೆಯ ಪುಸ್ತಕದ ಹಾಳೆಗಳ ಮಧ್ಯದಲ್ಲಿ ಒಂದೊಂದು ಎಲೆಯನ್ನು ಪ್ರತ್ಯೇಕವಾಗಿ ಇಡುವಂತೆ ತಿಳಿಸುವರು.<br>**ಸೂಚನೆ :** ಶಿಕ್ಷಕರು ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ನೀಡಿ ಎಲ್ಲಾ ಕೆಲಸಗಳನ್ನು ಮಕ್ಕಳಿಂದ ಮಾಡಿಸುವರು. | | | | ಶಿಕ್ಷಕ | 1ನೇ ತರಗತಿಯಲ್ಲಿ ತಿಳಿಸಿರುವಂತೆ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 10 ನಿ | | | | ಶಿಕ್ಷಕ | ಹಿರೇಮಣಿಗಳ ಸಹಾಯದಿಂದ ಎಲೆಗಳನ್ನು ಜೋಡಿಸಿರುವ ಪುಸ್ತಕಗಳನ್ನು ಒಪ್ಪವಾಗಿ ಜೋಡಿಸಿ ಇಡಿಸುವರು. | | | | ಶಿಕ್ಷಕ | 1ನೇ ತರಗತಿಯಲ್ಲಿ ಸೂಚಿಸಿರುವಂತೆ ಚಟುವಟಿಕೆಯಲ್ಲಿ ಭಾಗವಹಿಸುವರು. |

**ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.**

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 K-4 | 10 ನಿ | ಕನ್ನಡ ಠಣ್ ! ಠಣ ! ಠಣ ! (ಕವನ) | * ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸ ಗೀತೆಗಳನ್ನು ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು | ವನ, ಹಸು, ಚಿತ್ರಪಟಗಳು | ಶಿಕ್ಷಕ | ಮೊದಲೆರಡು ಪದ್ಯಗಳನ್ನು ಮಕ್ಕಳು ರಾಗವಾಗಿ ಹಾಡಿಕೊಳ್ಳುವಂತೆ ಸೂಚಿಸುವರು. | ಕನ್ನಡ ಕೋಗಿಲೆ (ಕವನ) | ಸರಳ ಹಾಗೂ ಬಳಕೆಯಲ್ಲಿರದ ಜನಪ್ರಿಯ ಪ್ರಾಸಗೀತೆಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವುದು. | ಪಠ್ಯಪುಸ್ತಕ<br>ಪಕ್ಷಿಗಳ ಚಿತ್ರಗಳು | ಶಿಕ್ಷಕ | ಹಿರೇಮಣಿಯ ನೇತೃತ್ವದಲ್ಲಿ ಪದ್ಯವನ್ನು ರಾಗವಾಗಿ ಹಾಡಿಸಿ ಅದರಲ್ಲಿ ಬರುವ ಪ್ರಾಸ ಪದಗಳನ್ನು ಹೆಚ್ಚು ಹೆಚ್ಚು ಬಾರಿ ಹೇಳಿಸಿ ನಂತರ ಪುಸ್ತಕದಲ್ಲಿ ಬರೆಯುವಂತೆ ಸೂಚಿಸುವರು. |
| | 30 ನಿ | | | | ಶಿಕ್ಷಕ | ಶಿಕ್ಷಕರು ಪದ್ಯದ ಮೂರನೇ ಭಾಗವಾದ ""ಸುತ್ತ ಹಸಿರು............" ಮೊದಲಿಗೆ ಮೂರು ನಾಲ್ಕು ಬಾರಿ ರಾಗ, ಭಾವ ಮತ್ತು ಅಭಿನಯದೊಂದಿಗೆ ಹೇಳಿಕೊಡುವರು ಮಕ್ಕಳು ಶಿಕ್ಷಕರ ಸೂಚನೆಯಂತೆ ಅಭಿನಯದೊಂದಿಗೆ ಹಾಡುವರು. | | | | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ಮಕ್ಕಳು ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | ಶಿಕ್ಷಕ | ಹಿರೇಮಣಿಯ ಸಹಕಾರದೊಂದಿಗೆ ಮಕ್ಕಳಿಗೆ ಈಗಾಗಲೇ ಗೊತ್ತಿರುವ ಸರಳ ಪ್ರಾಸ ಗೀತೆಗಳನ್ನು ಹೇಳಿಸುವಂತೆ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಮಕ್ಕಳು ನಿರ್ವಹಿಸಿದ ಚಟುವಟಿಕೆಗಳನ್ನು ವೀಕ್ಷಿಸಿ ಮಾರ್ಗದರ್ಶನ ನೀಡುವರು. |
| | 25 ನಿ | | | | ಶಿಕ್ಷಕ | ಮಕ್ಕಳು ತಮ್ಮ ಪರಿಸರದಲ್ಲಿ ಕಲಿತಿರುವ ಪ್ರಾಸಗೀತೆಗಳನ್ನು ರಾಗವಾಗಿ ಅಭಿನಯದೊಂದಿಗೆ ಹಾಡುವರು. | | | | ಶಿಕ್ಷಕ | ಪಠ್ಯಪುಸ್ತಕ ಪುಟ ಸಂಖ್ಯೆ – 2ರಲ್ಲಿರುವ ಅಭ್ಯಾಸದ ಎಲ್ಲಾ ಚಟುವಟಿಕೆಗಳನ್ನು ಮಾಡಿಸುವರು. ಮಕ್ಕಳನ್ನು ಪ್ರಶ್ನಿಸಿ ಅವರ ಉತ್ತರಗಳನ್ನು ಅವಶ್ಯಕತೆ ಇದ್ದಲ್ಲಿ ತಿದ್ದುವರು ಮತ್ತು ಅಭ್ಯಾಸ ಪುಸ್ತಕದಲ್ಲಿ ಬರೆಸುವರು. |
| | 10 ನಿ | | | | ಶಿಕ್ಷಕ | ಮಕ್ಕಳು ಹಾಡಿದಂತಹ ಪ್ರಾಸ ಗೀತೆಗಳನ್ನು ಮೆಚ್ಚಿ ಚಪ್ಪಾಳೆ ಮೂಲಕ ಪ್ರೋತ್ಸಾಹಿಸುವರು. | | | | ಶಿಕ್ಷಕ | ಅಭ್ಯಾಸ ಪುಸ್ತಕಗಳನ್ನು ವೀಕ್ಷಿಸಿ ಮಾರ್ಗದರ್ಶನ ನೀಡುವರು. |

**ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.**

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯಗಳು | ಬಳಸುವ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯಗಳು | ಬಳಸುವ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2<br>M-3 | 10 ನಿ | ಗಣಿತ<br>ಸಂಖ್ಯೆಗಳು | * ಒಂದರಿಂದ 5ರವರೆಗಿನ ಸಂಖ್ಯೆಗಳನ್ನು ಗುರುತಿಸಿ ವಸ್ತುಗಳನ್ನು ಎಣಿಸಿ ಸಂಖ್ಯಾ ಸೂಚಕಗಳನ್ನು ಅವುಗಳಿಗೆ ಹೊಂದಿಸುವ ಸಾಮರ್ಥ್ಯ | ಗುಂಡಿ/<br>ಬೀಜಗಳು<br>ಕಲ್ಲು 1–5<br>ಸಂಖ್ಯೆಗಳ<br>ಕಾರ್ಡ್ | ಶಿಕ್ಷಕ | ಒಂದರಿಂದ 5ರವರೆಗಿನ ಸಂಖ್ಯೆಗಳನ್ನು ಬೆರಳುಗಳನ್ನು ಎಣಿಸುತ್ತಾ ಹೇಳುವಂತೆ ಮಾರ್ಗದರ್ಶನ ನೀಡುವರು. | ಗಣಿತ<br>ಸಂಖ್ಯೆಗಳು | * ಒಂದರಿಂದ 99ರ ವರೆಗಿನ ಸಂಖ್ಯೆಗಳನ್ನು ಗುರುತಿಸುವರು, ಎಣಿಸುವರು ಮತ್ತು ಬರೆಯುವರು. | | ಶಿಕ್ಷಕ | ಒಂದರಿಂದ 50ರ ವರೆಗಿನ ಸಂಖ್ಯೆಗಳನ್ನು ಹಿರೇಮಣಿಯ ಸಹಾಯದಿಂದ 3–4 ಬಾರಿ ಹೇಳಿಸುವರು ಮತ್ತು ಬರೆಸುವರು. |
| | 25 ನಿ | | | | ಶಿಕ್ಷಕ | 1ರಿಂದ 5ರ ವರೆಗಿನ ಸಂಖ್ಯೆಗಳನ್ನು ಬರೆಯುವ ವಿಧಾನವನ್ನು ಮಕ್ಕಳಿಗೆ ಪರಿಚಯಿಸಿ, ಅದನ್ನು ಸ್ಲೇಟಿನಲ್ಲಿ ಹೆಚ್ಚು ಹೆಚ್ಚು ಬಾರಿ ಅಭ್ಯಾಸ ಮಾಡಿಸಿ, ನಂತರ ಕಲ್ಲು/ಬೀಜಗಳನ್ನು ಎಣಿಸಿ ಅವುಗಳನ್ನು ಸಂಖ್ಯಾಸೂಚಕದ ಕಾರ್ಡ್‌ಗಳಿಗೆ ಹೊಂದಿಸುವ ಚಟುವಟಿಕೆ ಮಾಡಿಸುವರು. | | | ಸಂಖ್ಯೆಗಳ ಚಾರ್ಟ್ | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ 1 ರಿಂದ 50 ಸಂಖ್ಯೆಗಳನ್ನು ಗಟ್ಟಿಯಾಗಿ ಹೇಳುವರು ಮತ್ತು ಬರೆಯುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಚಟುವಟಿಕೆಗಳನ್ನು ಶಿಕ್ಷಕರು ಪರಿಶೀಲಿಸಿ, ಮಾರ್ಗದರ್ಶನ ನೀಡುವರು ಮತ್ತು ಸಂಖ್ಯೆಗಳ ಕಾರ್ಡ್‌ಗಳಿಗೆ ಬೀಜಗಳನ್ನು ಹೊಂದಿಸುವ ಚಟುವಟಿಕೆ ಮುಂದುವರೆಸುವಂತೆ ಸೂಚನೆ ನೀಡುವರು. | | | | ಶಿಕ್ಷಕ | ಮಕ್ಕಳ ಬರವಣಿಗೆಯನ್ನು ಪರಿಶೀಲಿಸಿ ಶಿಕ್ಷರು ಮಾರ್ಗದರ್ಶನ ನೀಡುವರು. |
| | 25 ನಿ | | | | ಹಿರೇಮಣಿ | ಮಕ್ಕಳು ಕಾರ್ಡ್‌ಗಳನ್ನು ಮತ್ತು ಬೀಜಗಳನ್ನು, ಗುಂಡಿಗಳನ್ನು ಬದಲಿಸುತ್ತಾ ಚಟುವಟಿಕೆ ಮುಂದುವರೆಸುವರು. | | | ಹುಣಸೇ ಬೀಜ<br>ಸಂಖ್ಯೆಗಳ<br>ಚಾರ್ಟ್ | ಶಿಕ್ಷಕ | 60 ರಿಂದ 99ರ ವರೆಗಿನ ಸಂಖ್ಯೆಗಳು ಇರುವ ಚಾರ್ಟ್‌ನ್ನು ಬಳಸಿ ಮೊದಲಿಗೆ ಸಂಖ್ಯೆಗಳನ್ನು ಹೇಳಿಸುವರು.<br>ನಂತರ ಪ್ರತಿ ಮಕ್ಕಳ ಗುಂಪು ಮಾಡಿ ಕ್ರಮಾನುಗತ ಸಂಖ್ಯೆಗಳುಳ್ಳ ಕಾರ್ಡ್ ನೀಡಿ ಅವುಗಳ ಮೇಲೆ ಸಂಖ್ಯೆಗಳನ್ನು ಹೇಳುತ್ತಾ ಹುಣಸೇ ಬೀಜಗಳನ್ನು ಇಡುತ್ತಾ ಎಣಿಸಲು ಹೇಳುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಚಟುವಟಿಕೆಗಳನ್ನು ಪರಿಶೀಲಿಸಿ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಕ್ರಮಾನುಗತ ಸಂಖ್ಯೆಗಳುಳ್ಳ ಕಾರ್ಡ್‌ಗಳ ಮೇಲೆ ಇಟ್ಟ ಬೀಜಗಳು ಮತ್ತು ಮಕ್ಕಳು ಹೇಳುತ್ತಿರುವ ಸಂಖ್ಯೆ ಸರಿ ಇದೆಯೇ ಎಂದು ಪರಿಶೀಲಿಸಿ ತಪ್ಪುಗಳನ್ನು ತಿದ್ದಿ ಮಾರ್ಗದರ್ಶನ ನೀಡುವರು. |

**ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.**

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ಅಂಶ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ಅಂಶ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3<br>K-5<br>ಮೊದಲ<br>40 ನಿ | 30 ನಿ | ಹಾಡು<br>ಠಣ್ ! ಠಣ್ ! ಠಣ್ ! | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗಳು ಗೀತೆಗಳು ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು | ಪಠ್ಯಪುಸ್ತಕ | ಶಿಕ್ಷಕ | **ಅಭ್ಯಾಸ ಮತ್ತು ಬಳಕೆಯ ಹಂತ/ಪುನರ್ಬಲನ ಚಟುವಟಿಕೆ:** ಠಣ್ ! ಠಣ್ ! ಠಣ್ ! ಮತ್ತು ಕೋಗಿಲೆ ಪದ್ಯವನ್ನು ಸಾಮೂಹಿಕವಾಗಿ ರಾಗವಾಗಿ ಹಾಡಿಸುವರು ಮತ್ತು ಮಕ್ಕಳಿಂದ ವೈಯಕ್ತಿಕವಾಗಿ ಹಾಡಿಸುವರು. | ಪದ್ಯ<br>1. ಕೋಗಿಲೆ | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸ ಗೀತೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು | ಪಠ್ಯಪುಸ್ತಕ | ಶಿಕ್ಷಕ | 1ನೇ ತರಗತಿಯಲ್ಲಿರುವಂತೆ ಎರಡನೇ ತರಗತಿಯ ವಿದ್ಯಾರ್ಥಿಗಳ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 10 ನಿ | | | ಪಠ್ಯಪುಸ್ತಕ | ಶಿಕ್ಷಕ | ಶಿಕ್ಷಕರ ನೆರವಿಲ್ಲದೆ ಮಕ್ಕಳು ರಾಗವಾಗಿ ಎರಡೂ ಪದ್ಯಗಳನ್ನು ಹಾಡುವಂತೆ ತಿಳಿಸುವರು. | | | | | ಸಾಮೂಹಿಕ ಗಾಯನದಲ್ಲಿ ಪಾಲ್ಗೊಳ್ಳುವರು. |
| ಊಟದ 40 ನಿಮಿಷ | 40 ನಿ | ಆರೋಗ್ಯ ಶಿಕ್ಷಣ<br>ವೈಯಕ್ತಿಕ ಸ್ವಚ್ಛತೆ | ದೇಹದ ಅಂಗಗಳ ಸ್ವಚ್ಛತೆಯ ಅಭ್ಯಾಸಗಳು ಪರಿಚಯ | ಚಿತ್ರ ಪಟಗಳು | ಶಿಕ್ಷಕರು | ಶಿಕ್ಷಕರು ಎಲ್ಲಾ ವಿದ್ಯಾರ್ಥಿಗಳ ದೇಹದ ಹೊರ ಅಂಗಗಳ ಸ್ವಚ್ಛತೆಯ ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡುವುದರ ಜೊತೆಗೆ ಅದರ ಮಹತ್ವ ತಿಳಿಸುವರು. | ಆರೋಗ್ಯ ಶಿಕ್ಷಣ<br>ವೈಯಕ್ತಿಕ ಸ್ವಚ್ಛತೆ | ದೇಹದ ಅಂಗಗಳ ಸ್ವಚ್ಛತೆಯ ಅಭ್ಯಾಸಗಳು ಪರಿಚಯ | ಚಿತ್ರ ಪಟಗಳು | ಶಿಕ್ಷಕರು | ಶಿಕ್ಷಕರು ಎಲ್ಲಾ ವಿದ್ಯಾರ್ಥಿಗಳ ದೇಹದ ಅಂಗಗಳ........ (1ನೇ ತರಗತಿಯಲ್ಲಿನ ಚಟುವಟಿಕೆ ಮಾಡಿಸುವರು. |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.

# ದಿನ – 4



| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4<br>ಮೊದಲ 40 ನಿ ಮಾತ್ರ | 10 ನಿ | ಸಾ.ಉ.ಉ. ಕಾರ್ಯ<br>ಬಟ್ಟೆಯಿಂದ ಡಸ್ಟರ್ ತಯಾರಿಕೆ | * ಬಟ್ಟೆಯನ್ನು ಹೊಲಿಯುವುದನ್ನು ಅಭ್ಯಾಸ ಮಾಡುವರು.<br>* ಡಸ್ಟರ್ ತಯಾರಿಸುವುದನ್ನು ಅರಿಯುವರು ಮತ್ತು ತಯಾರಿಸುವರು | 12x24 cms ಹತ್ತಿ– ಬಟ್ಟೆ ಸೂಜಿ, ದಾರ, ಬಟ್ಟೆಯ ಸಣ್ಣ ಸಣ್ಣ ಚೂರು | ಶಿಕ್ಷಕ | ಮೊದಲಿಗೆ ಶಿಕ್ಷಕರು, ತರಗತಿಗಳಲ್ಲಿನ ಮಕ್ಕಳ ಸಂಖ್ಯೆಗಳಿಗೆ ಅನುಗುಣವಾಗಿ 5–6 ಗುಂಪು ಮಾಡಿ, ಡಸ್ಟರ್ ತಯಾರಿಸುವ ವಿಧಾನ ಹಾಗೂ ಕ್ರಮದ ಬಗ್ಗೆ ವಿವರಣೆ ನೀಡಿ ಅವರಿಗೆ ಬಟ್ಟೆ ಸೂಜಿ ಹಾಗೂ ದಾರವನ್ನು ವಿತರಿಸುವರು. | | | | | (**ಸೂಚನೆ :** ಸಾ.ಉ.ಉ. ಕಾರ್ಯದ ಸಾಮರ್ಥ್ಯಗಳು ಸಂಪೂರ್ಣವಾಗಿ ಸಹಸಂಬಂಧ ಇರುವುದರಿಂದ, ಎರಡೂ ತರಗತಿಗಳೂ ಒಟ್ಟುಗೂಡಿ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು)<br>[ಒಂದನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು). |
| | 25 ನಿ | | | | ಶಿಕ್ಷಕ | ನಂತರ ಮಕ್ಕಳು ಈ ಮೊದಲೇ ಸಂಗ್ರಹಿಸಿ ತಂದ ಬಟ್ಟೆಯ ಚಿಕ್ಕ ಚಿಕ್ಕ ತುಂಡುಗಳನ್ನು ವಿಂಗಡಿಸಿ, ಅದರಲ್ಲಿನ ಒರಟಾದ ಬಟ್ಟೆಯ ತುಂಡು, ಗುಂಡಿ, ಹುಕ್ ಇತ್ಯಾದಿಗಳನ್ನು ಬೇರ್ಪಡಿಸಲು, 1ನೇ ತರಗತಿಗೆ ಹಾಗೂ ದೊಡ್ಡ ಬಟ್ಟೆಯನ್ನು ಮಡಿಸಿ, ಮೂರು ಕಡೆಗಳಲ್ಲಿ ಹೊಲಿಯುವಂತೆ 2ನೇ ತರಗತಿಗೆ ಸೂಚಿಸುವರು.<br><br>ನಂತರ ಹೊಲಿದ ಬಟ್ಟೆಯೊಳಗೆ ತುಂಡು ಬಟ್ಟೆಗಳನ್ನು ತುಂಬುವಂತೆ ಸೂಚಿಸುವುದು. ಕೊನೆಯಲ್ಲಿ 4ನೇ ಬದಿಯನ್ನೂ ಹೊಲಿಯುವಂತೆ ಸೂಚಿಸುವರು.<br><br>ಹೊಲಿಯುವ ಕ್ರಮದಲ್ಲಿ ಶಿಕ್ಷಕರು ಮಕ್ಕಳಿಗೆ ಸಹಕಾರ ನೀಡುವರು. | | | | | |
| | 5 ನಿ | | | | | ಕೊನೆಯಲ್ಲಿ ಶಿಕ್ಷಕರು ಉತ್ತಮವಾದ ಡಸ್ಟರ್ ತಯಾರಿಸಿದ ಗುಂಪಿಗೆ ಮೆಚ್ಚುಗೆ ಸೂಚಿಸಿ, ಚಪ್ಪಾಳೆಯೊಂದಿಗೆ ಪ್ರೋತ್ಸಾಹ ನೀಡುವರು.<br>**ಸೂಚನೆ :** ಬಟ್ಟೆ ಹೊಲಿಯುವಲ್ಲಿ ಶಿಕ್ಷಕರು ಮಕ್ಕಳಿಗೆ ನೆರವಾಗುವರು. | | | | | |

**ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.**

## ದಿನ - 4



| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **4** ಮೊದಲು 40 ನಿ. ಮಾತ್ರ | 30 ನಿ | ಮೌಲ್ಯ ಶಿಕ್ಷಣ ಪ್ರಾಮಾಣಿಕತೆ | ಕಥೆಯನ್ನು ಆಲಿಸಿ ಅದರಲ್ಲಿನ ನೀತಿಯನ್ನು ಅರ್ಥಮಾಡಿಕೊಳ್ಳುವುದು | ಗ್ರಂಥಾಲಯದಲ್ಲಿನ ಪುಸ್ತಕಗಳು / ಪಂಚತಂತ್ರಗಳ ನೀತಿ ಕಥೆಯಲ್ಲಿನ ಧ್ವನಿಸುರುಳಿಗಳು | ಶಿಕ್ಷಕರು | ಮೂರು ಕೊಡಲಿಗಳು (ಇದೇ ರೀತಿಯ ಇತರೆ ಕಥೆಗಳನ್ನು ಬಳಸಬಹುದು) ಕಥೆಯನ್ನು ಭಾವ ಪೂರ್ಣವಾಗಿ ಶಿಕ್ಷಕರು ಮಕ್ಕಳ ಮನಮುಟ್ಟುವಂತೆ ಹೇಳುವರು. | ಮೌಲ್ಯಶಿಕ್ಷಣ ಪ್ರಾಮಾಣಿಕತೆ | ಕಥೆಯನ್ನು ಆಲಿಸಿ ಅದರಲ್ಲಿನ ನೀತಿಯನ್ನು ಅರ್ಥಮಾಡಿಕೊಳ್ಳುವುದು | ಗ್ರಂಥಾಲಯದಲ್ಲಿನ ಪುಸ್ತಕಗಳು / ಪಂಚತಂತ್ರ ನೀತಿ ಕಥೆಗಳ ಧ್ವನಿ ಸುರುಳಿಗಳು | ಶಿಕ್ಷಕರು | ಮಕ್ಕಳು ಕಥೆಯನ್ನು ಆಲಿಸುವರು. (1ನೇ ತರಗತಿಯಲ್ಲಿ ಅಳವಡಿಸಿರುವ ಚಟುವಟಿಕೆ) |
| | 10 ನಿ | | | | ಶಿಕ್ಷಕರು | ಈ ಕಥೆಯಿಂದ ಮಕ್ಕಳು ಗ್ರಹಿಸಿದ ಪ್ರಾಮಾಣಿಕತೆಯನ್ನು ನಿತ್ಯ ಜೀವನದ ಸನ್ನಿವೇಶಗಳಲ್ಲಿ ಹೇಗೆ ಅಳವಡಿಸಿಕೊಳ್ಳುವರು ಎಂಬುದನ್ನು ಪ್ರಶ್ನೆಗಳ ಮೂಲಕ ಪರಿಶೀಲಿಸವುದು. ಉದಾ : ತರಗತಿಯಲ್ಲಿ ನಮ್ಮದಲ್ಲದ ಒಂದು ವಸ್ತು ಸಿಕ್ಕಿದಾಗ.... ಇತ್ಯಾದಿ | | | | ಶಿಕ್ಷಕರು | ಶಿಕ್ಷಕರ ಪ್ರಶ್ನೆಗಳಿಗೆ ಮಕ್ಕಳು ತಮ್ಮ ಪ್ರತಿಕ್ರಿಯೆ ತೋರಿಸುವರು. |
| | | | | | | | | | | | |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1<br>K-6 | 10 ನಿ | ಕನ್ನಡ<br>ಠಣ್ ! ಠಣ ! ಠಣ ! (ಪದ್ಯ) | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗಳನ್ನು, ಪ್ರಾಸಗೀತೆಗಳನ್ನು ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು. | ಪ್ರಾಸಗೀತೆ | ಶಿಕ್ಷಕ | "'ಸಂತೆಗೆ ಹೋದನು ಸೋಮಣ್ಣ......"<br>.....ಹಿಂಡಿಯ ಕೊಂಡನು ಹತ್ತುಮಣ".<br>ಪ್ರಾಸ ಗೀತೆಯನ್ನು ಸಾಮೂಹಿಕವಾಗಿ ಹಾಡಿಸುವರು. | ಕನ್ನಡ<br>1. ಕೋಗಿಲೆ | ಸರಳ ಹಾಗೂ ಬಳಕೆಯಲ್ಲಿರದ ಜನಪ್ರಿಯ ಪ್ರಾಸಗೀತೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು. | ಪಠ್ಯಪುಸ್ತಕ<br>ಪ್ರಾಸಪದಗಳು<br>ಮಿಂಚು<br>ಪಟ್ಟಿಗಳು | ಶಿಕ್ಷಕ | ಮಕ್ಕಳು ಚಟುವಟಿಕೆಯಲ್ಲಿ ತೊಡಗುವರು. |
| | 25 ನಿ | | | | ಶಿಕ್ಷಕ | ಶಿಕ್ಷಕರು ಪ್ರತಿ ಮಗುವೂ ಈ ಹಿಂದೆ ಕಲಿತಿರುವ ಪ್ರಾಸ ಗೀತೆಗಳನ್ನು ವೈಯಕ್ತಿಕವಾಗಿ ಹೇಳಿಸುವರು ಮತ್ತು ಪುಟ ಸಂಖ್ಯೆ 3ರಲ್ಲಿನ (ಅ) ಅಭ್ಯಾಸವನ್ನು ಮಾಡಿಸುವರು. | | | | ಹಿರೇಮಣಿ | ಈ ಪದ್ಯದಲ್ಲಿ ಬಂದ ಪ್ರಾಸ ಪದಗಳನ್ನು ಪಟ್ಟಿ ಮಾಡುವಂತೆ ಹೇಳುವರು ಮತ್ತು ಅವುಗಳನ್ನು ಪುಸ್ತಕದಲ್ಲಿ ಅಂದವಾಗಿ ಬರೆಯುವಂತೆ ಸೂಚಿಸುವರು. |
| | 10 ನಿ | | | | ಹಿರೇಮಣಿ | ವಿವಿಧ ಸನ್ನಿವೇಶಗಳ ಚಿತ್ರಪಟಗಳನ್ನು (ಪರಿಸರ) ಮಕ್ಕಳಿಗೆ ಕೊಟ್ಟು ಅದರಲ್ಲಿನ ಪ್ರಾಣಿ ಪಕ್ಷಿಗಳನ್ನು ಮಕ್ಕಳು ಗುರುತಿಸಿ ಹೆಸರಿಸುವಂತೆ ತಿಳಿಸುವರು. ಮತ್ತು ಅವುಗಳ ಕೂಗುಗಳನ್ನು ಅನುಕರಣೆ ಮಾಡುವರು. | | | | ಶಿಕ್ಷಕ | ಮಕ್ಕಳು ಪಟ್ಟಿ ಮಾಡಿರುವ ಪ್ರಾಸಪದಗಳನ್ನು ಪರಿಶೀಲಿಸಿ ಮಾರ್ಗದರ್ಶನ ನೀಡುವರು. |
| | 25 ನಿ | | | | ಹಿರೇಮಣಿ | ಮೇಲೆ ಸೂಚಿಸಿರುವ ಚಟುವಟಿಕೆಯಲ್ಲಿ ಮಕ್ಕಳು ತೊಡಗುವರು. | | | | ಶಿಕ್ಷಕ | ಪಠ್ಯಪುಸ್ತಕದ ಪುಟ–3ರಲ್ಲಿರುವ ಭಾಷಾಭ್ಯಾಸ ಹಾಗೂ ಭಾಷಾ ಚಟುವಟಿಕೆಗಳನ್ನು ಮಾಡಿಸುವರು ಮತ್ತು ಮಾದರಿಯಂತೆ ಬರೆಯಿಸುವರು. |
| | 10 ನಿ | | | | | ಮಕ್ಕಳ ಚಟುವಟಿಕೆಗಳನ್ನು ವೀಕ್ಷಿಸಿ ಚಪ್ಪಾಳೆಯ ಮೂಲಕ ಪ್ರೋತ್ಸಾಹ ನೀಡುವರು. | | | | | ಮಕ್ಕಳ ಬರವಣಿಗೆಯನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ತಿದ್ದಿ ಮಾರ್ಗದರ್ಶನ ನೀಡುವರು. |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2<br>M-4 | 10 ನಿ | ಗಣಿತ<br>2. ಸಂಖ್ಯೆಗಳು | * 99ರ ವರೆಗೆ ಸಂಖ್ಯೆಗಳನ್ನು ಗುರುತಿಸುವುದು.<br>* 99ರ ವರೆಗೆ ಸಂಖ್ಯೆಗಳನ್ನು ಬಿಡಿ ಮತ್ತು ಹತ್ತು ಕ್ರಮದಲ್ಲಿ ಬರೆಯುವುದು. | | ಶಿಕ್ಷಕ | ತರಗತಿಯಲ್ಲಿರುವ ವಿವಿಧ ವಸ್ತುಗಳನ್ನು (5ಕ್ಕೆ ಮೀರದಂತೆ) ಎಣಿಸಲು ಹೇಳುವುದು.<br>ಉದಾ : ಕುರ್ಚಿ, ಕಿಟಕಿಗಳು, ಇತ್ಯಾದಿ | ಗಣಿತ<br>ಸಂಖ್ಯೆಗಳು | * ನೂರರ ಒಳಗಿನ ಸಂಖ್ಯೆಗಳನ್ನು ಎಣಿಸುವುದು, ಬರೆಯುವುದು ಮತ್ತು ಹತ್ತು ಬಿಡಿಗಳಾಗಿ ವಿಸ್ತರಿಸುವುದು. | ಬೀಜಗಳು<br>ಕಡ್ಡಿಗಳು<br>ಸಂಖ್ಯೆಗಳ<br>ಕಾರ್ಡ್‌ಗಳು | ಶಿಕ್ಷಕ | 1 ರಿಂದ 33ರ ವರೆಗೆ ಚಾರ್ಟ್‌ನಲ್ಲಿ ತೋರಿಸುತ್ತಾ ಸಂಖ್ಯೆಗಳನ್ನು ಗಟ್ಟಿಯಾಗಿ ವಿದ್ಯಾರ್ಥಿಗಳಿಗೆ ಹೇಳಿಸುವಂತೆ ವಿದ್ಯಾರ್ಥಿ (ಹಿರೇಮಣಿಗೆ) ಶಿಕ್ಷಕರು ಸೂಚನೆ ನೀಡುವರು. |
| | 25 ನಿ | | | Wall-slate<br>ಪುಸ್ತಕ,<br>ಸ್ಲೇಟ್ | ಹಿರೇಮಣಿ | ಶಿಕ್ಷಕ ಮಕ್ಕಳಿಗೆ "ಹಿರೇಮಣಿಯ ನೇತೃತ್ವದಲ್ಲಿ 1 ರಿಂದ 5 ಬರೆಯುವ ವಿಧಾನವನ್ನು ತಮ್ಮ ಸ್ಲೇಟ್ ಅಥವಾ Wall-slate ಮೇಲೆ ಬರೆದು ಹೇಳುತ್ತಾ ಅಭ್ಯಾಸ ಮಾಡಲು ಹೇಳುವರು. | | | | ಶಿಕ್ಷಕ | ಶಿಕ್ಷಕರು ವಿದ್ಯಾರ್ಥಿಗಳಿಗೆ ಹತ್ತುಗಳ ಕಟ್ಟು ಹಾಗೂ ಬಿಡಿಗಳನ್ನು (ಕಡ್ಡಿ/ಬೀಜ)ಗಳನ್ನು ಬಳಸಿ, ಹತ್ತುಗಳು ಮತ್ತು ಬಿಡಿಗಳನ್ನು ಪರಿಚಯಿಸುವರು.<br><br>+ I = 1 ಹತ್ತು + 1 ಬಿಡಿ<br>= 10 + 1 = 11<br>+ III = 4 ಹತ್ತು + 3 ಬಿಡಿ<br>= 40 + 3 = 43<br>ಸಂಖ್ಯೆಗಳ ಕಾರ್ಡ್ ಬಳಸಿ ಮೇಲಿನಂತೆ, ಹೇಳಿಸಿ ಬರೆಯುವಂತೆ ಅಭ್ಯಾಸ ಮಾಡಿಸುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಬರವಣಿಗೆ ವೀಕ್ಷಿಸಿ, ತಪ್ಪುಗಳಿದ್ದರೆ ತಿದ್ದಿ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಮಕ್ಕಳ ಚಟುವಟಿಕೆ ಗಮನಿಸಿ. ಇದೇ ರೀತಿ ಪುಟ ಸಂಖ್ಯೆ 16, 17, 18, 19ರಲ್ಲಿನ ಚಟುವಟಿಕೆಗಳನ್ನು ಮಾಡಿಸುವಂತೆ ಹಿರೇಮಣಿಗೆ ನಿರ್ದೇಶನ ನೀಡುವರು. |
| | 25 ನಿ | | | ಪಠ್ಯಪುಸ್ತಕ | ಶಿಕ್ಷಕ | ಶಿಕ್ಷಕರು ಸ್ಲೇಟಿನಲ್ಲಿ ಅಭ್ಯಾಸ ಮಾಡಿದ ಬರವಣಿಗೆ ವೀಕ್ಷಿಸಿ, ನಂತರ ಪಠ್ಯ ಪುಸ್ತಕದ ಪುಟ ಸಂಖ್ಯೆ 17 ರಿಂದ 21ರವರೆಗೆ ಸಂಖ್ಯೆಗಳನ್ನು ತಿದ್ದಿ ಬರೆಯುವಂತೆ ಸೂಚನೆ ನೀಡುವರು. | | | | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ಪುಟ ಸಂಖ್ಯೆ 16,17,18,19ರ ಚಟುವಟಿಕೆಯಲ್ಲಿ ತೊಡಗುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಬರವಣಿಗೆಯನ್ನು ತಿದ್ದಿ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ವಿದ್ಯಾರ್ಥಿಗಳ ಪುಸ್ತಕ ವಿಶ್ಲೇಷಿಸಿ, ಅದರ ತಪ್ಪುಗಳನ್ನು ತಿದ್ದುವರು. |

ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ 'ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು'.

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 15 ನಿ | ಸಾ. ಉ. ಉ. ಕಾ. | ನಿರುಪಯುಕ್ತ ವಸ್ತುಗಳಿಂದ ಆಕೃತಿಗಳನ್ನು ರಚಿಸುವ ಸಾಮರ್ಥ್ಯ ಬೆಳೆಸುವುದು. | ಡ್ರಾಯಿಂಗ್ ಶೀಟ್, ಗಮ್, ಕತ್ತರಿ, ಹಕ್ಕಿಗಳ ಉದುರಿದ ಗರಿಗಳು | ಶಿಕ್ಷಕ | ಹಿಂದಿನ ಅವಧಿಯಲ್ಲಿ ಸಂಗ್ರಹಿಸಿರುವ ವಸ್ತುಗಳನ್ನು ತೆಗೆದುಕೊಂಡು ತಮ್ಮ ತಮ್ಮ ಗುಂಪುಗಳಲ್ಲಿ ಕೂರಲು ಸೂಚಿಸಿ ಗುಂಪಿನಲ್ಲಿ ಕೂರಿಸುವರು. | | | | | **ಸೂಚನೆ :** 1ನೇ ತರಗತಿಯಲ್ಲಿ ನೀಡಿರುವ ಚಟುವಟಿಕೆ 2ನೇ ತರಗತಿಗೂ ಅನ್ವಯವಾಗುವುದರಿಂದ ಎರಡೂ ತರಗತಿಗಳು ಒಟ್ಟಿಗೆ ಪಾಲ್ಗೊಳ್ಳುವರು. |
| | 10 ನಿ | | | | ಗುಂಪು ಚಟುವಟಿಕೆ | ವಿವಿಧ ಆಕೃತಿಗಳನ್ನು ರಚಿಸಲು, ಅಗತ್ಯವಾದ ವಸ್ತುಗಳನ್ನು ಆಯ್ದುಕೊಳ್ಳಲು ಸೂಚಿಸುವರು ಮಕ್ಕಳು ಆರಿಸಿಕೊಳ್ಳುವರು. | | | | | |
| | 45 ನಿ | | | | ಶಿಕ್ಷಕ | ¼ ಅಳತೆಯ ಡ್ರಾಯಿಂಗ್‌ಶೀಟ್ ಕೊಟ್ಟು ಅದರಲ್ಲಿ ಈ ಹಿಂದಿನ ತರಗತಿಯಲ್ಲಿ ಹೇಳಿಕೊಟ್ಟು ಕಲಿಸಿರುವಂತೆ ವಿವಿಧ ಆಕೃತಿಗಳನ್ನು ರಚಿಸಲು ಸಹಾಯ ಮಾಡುವರು.<br>* ಮಕ್ಕಳು ಶಿಕ್ಷಕರ ನೇತೃತ್ವದಲ್ಲಿ ಆಕೃತಿಗಳನ್ನು ರಚಿಸುವರು. | | | | | **ಸೂಚನೆ :** ಈ ಚಟುವಟಿಕೆಗೆ ಶಿಕ್ಷಕರು ವೈಯಕ್ತಿಕ ಸಲಹೆ ಮಾರ್ಗದರ್ಶನ ಅವಶ್ಯಕವಾಗಿದ್ದು ಪೂರ್ಣವಾಗಿ ತೊಡಗಿಸಿ ಕೊಳ್ಳಬೇಕು. |
| | 10 ನಿ | | | | ಶಿಕ್ಷಕ | ಮಕ್ಕಳು ತಯಾರಿಸಿರುವ ಆಕೃತಿಗಳನ್ನು ಪರಿಶೀಲಿಸಿ ಸೂಕ್ತಮಾರ್ಗದರ್ಶನ ನೀಡಿ ಉತ್ತಮವಾಗಿ ತಯಾರಿಸಿರುವ ಮಕ್ಕಳು ಮತ್ತು ಇತರೆ ಮಕ್ಕಳಿಗೆ ಪ್ರೋತ್ಸಾಹಿಸುವರು. | | | | | |